ಹುಡುಗರಷ್ಟೇ ಅಲ್ಲ ವಿದೇಶದ ಆಟಗಾರರೂ ಇದರ ಫಲಾನುಭವಿಗಳಾಗಿದ್ದಾರೆ.

ಅದಕ್ಕೆ ಸೂಕ್ತ ಉದಾಹರಣೆ ಈ ವರ್ಷದ ಹರಾಜಿನಲ್ಲಿ 12 ಕೋಟಿ ರೂಪಾಯಿಗೆ ಆರ್‌ಸಿಬಿ ತಂಡದ ಪಾಲಾದ ಇಂಗ್ಲೆಂಡ್ ಆಟಗಾರ ಟೈಮಲ್ ಮಿಲ್ಸ್. ಕೇವಲ ಒಂದು ಅಂತರರಾಷ್ಟ್ರೀಯ ಪಂದ್ಯವಾಡಿ ಬೆನ್ನುನೋವಿನಿಂದ ಆಟದಿಂದ ದೂರ ಉಳಿದಿದ್ದ ಮಿಲ್ಸ್ ಕೂಡ ಈ ವಿಷಯ ತಿಳಿದು ಬೆಕ್ಕಸಬೆರಗಾಗಿದ್ದರು.

'ನಾನು ದುಬೈ ಹೋಟೆಲ್‌ನಲ್ಲಿ ಇದ್ದೆ. ಲಂಡನ್‌ನಿಂದ ನನ್ನ ಸ್ನೇಹಿತ ಈ ವಿಷಯ ತಿಳಿಸಿ ಟಿವಿ ನೋಡುವಂತೆ ಹೇಳಿದ. ನಂಬಲು ಸಾಧ್ಯವೇ ಆಗಲಿಲ್ಲ. ಗಾಯದಿಂದಾಗಿ ನನ್ನ ಕ್ರಿಕೆಟ್ ಜೀವನವೇ ಮುಗಿಯಿತು ಎಂಬ ಹಂತದಲ್ಲಿ ದೊಡ್ಡ ಮೊತ್ತದ ಹಣ ಲಭಿಸಿದೆ. ಬಾಲ್ಯದಲ್ಲಿ ಮಾರುಕಟ್ಟೆಯಲ್ಲಿ ಕಠಿಣ ಕೆಲಸ ಮಾಡಿ ಕುಟುಂಬದ ಖರ್ಚು ನಿಭಾಯಿಸಿದ್ದೆ. ಇದೀಗ ನನ್ನ ಅಮ್ಮ ಮತ್ತು ತಂಗಿಗೊಂದು ಪುಟ್ಟ ಮನೆ ಕಟ್ಟಿಸಿಕೊಡುವ ಕನಸಿಗೆ ಬಲ ಬಂದಿದೆ' ಎಂದು ಮಿಲ್ಸ್ ಅವರು 'ಡೇಲಿ ಮೇಲ್' ಪತ್ರಿಕೆಗೆ ನೀಡಿದ್ದ ಸಂದರ್ಶನದಲ್ಲಿ ಹೇಳಿದ್ದರು.

ಆಟಗಾರರನ್ನು ಆರ್ಥಿಕವಾಗಿಯಷ್ಟೇ ಅಲ್ಲ. ಭಾರತದೊಂದಿಗೆ ಭಾವನಾತ್ಮಕ ಮತ್ತು ಆತ್ಮೀಯ ನಂಟು ಹೊಂದುವ ಅವಕಾಶವನ್ನೂ ವಿದೇಶಿ ಆಟಗಾರರಿಗೆ ಈ ಟೂರ್ನಿಯು ನೀಡುತ್ತಿದೆ.

## ಆಟೋ ಚಾಲಕನ ಮಗ ಈಗ ಕೋಟ್ಯಧೀಶ

ಎರಡು ತಿಂಗಳು ಹಿಂದೆ ಹೈದರಾಬಾದಿನ ಆ ಪುಟ್ಟ ಮನೆಯಲ್ಲಿ ಸಡಗರ ಮೇರೆ ಮೀರಿತ್ತು. ಇಡೀ ಮೊಹಲ್ಲಾಕ್ಕೆ ಸಿಹಿ ಮತ್ತು ಹೈದರಾಬಾದ್ ಬಿರಿಯಾನಿಯ ರಸದೌತಣವನ್ನು ಆ ಕುಟುಂಬ ನೀಡಿತ್ತು. ಅದಕ್ಕೆ ಕಾರಣವಾಗಿದ್ದು ಐಪಿಎಲ್. ಆ ಮನೆಯ ಹುಡುಗ ಮೊಹಮ್ಮದ್ ಸಿರಾಜ್ ಅವರನ್ನು ಸನ್‌ರೈಸರ್ಸ್ ತಂಡವು ₹ 2.6 ಕೋಟಿ ಕೊಟ್ಟು ಖರೀದಿಸಿತ್ತು. ಆಟೋ ಚಾಲಕ ಗೌಸ್ ಮೊಹಮ್ಮದ್ ಅವರ ಮಗ ಸಿರಾಜ್ ಅವರು ತಮ್ಮ ಪ್ರತಿಭೆಯಿಂದ ಕುಟುಂಬವನ್ನು ಕೋಟ್ಯಧಿಪತಿಯನ್ನಾಗಿ ಮಾಡಿದ್ದರು.

23 ವರ್ಷದ ಬಲಗೈ ಮಧ್ಯಮವೇಗಿ ಸಿರಾಜ್ ಹೈದರಾಬಾದ್ ರಣಜಿ ತಂಡಕ್ಕೆ ಕೇವಲ 11 ಪಂದ್ಯಗಳನ್ನು ಆಡಿರುವ ಅನುಭವಿ. ದೇಶಿ ಟ್ವೆಂಟಿ–20 ಕ್ರಿಕೆಟ್‌ನಲ್ಲಿ ಆಡಿದ್ದು ಕೇವಲ 10 ಪಂದ್ಯಗಳನ್ನು ಮಾತ್ರ. ಅದರಲ್ಲಿ ಅವರು ತೋರಿದ ಪ್ರತಿಭೆಗೆ ಐಪಿಎಲ್ ಮನ್ನಣೆ ನೀಡಿದೆ. ಘಟಾನುಘಟಿ ಬೌಲರ್‌ಗಳು ತಂಡದಲ್ಲಿರುವುದರಿಂದ ಅವರಿಗೆ ಎಷ್ಟು ಅವಕಾಶ ಸಿಗಲಿದೆ ಎಂದು ಕಾದು ನೋಡಬೇಕು.

### ಭಾರತದಲ್ಲಿ ನಡೆಯುವ ಪ್ರಮುಖ ದೇಶಿ ಲೀಗ್‌ಗಳು

★ ಸೈಯದ್ ಮುಷ್ತಾಕ್ ಅಲಿ ಟ್ರೋಫಿ (ಅಂತರರಾಜ್ಯ
★ ಸೈಯದ್ ಮುಷ್ತಾಕ್ ಅಲಿ ಟ್ರೋಫಿ (ಅಂತರವಲಯಮಟ್ಟ)
★ ತಮಿಳುನಾಡು ಪ್ರೀಮಿಯರ್ ಲೀಗ್
★ ರಾಜವಾಡ ಪ್ರೀಮಿಯರ್ ಲೀಗ್
★ ಹರಿಯಾಣ ಪ್ರೀಮಿಯರ್ ಲೀಗ್
★ ಮಹಿಳೆಯರ ಅಂತರರಾಜ್ಯ ಟ್ವೆಂಟಿ–20 ಚಾಂಪಿಯನ್‌ಷಿಪ್

## ತರುಣರ ದಂಡಿಗೆ ರಣವೀಳ್ಯ

– ಈ ಮೇಲಿನ ನಾಲ್ಕು ಆಟಗಾರರು ಐಪಿಎಲ್ ಟೂರ್ನಿಯ ಜನಪ್ರಿಯತೆ, ಆಕರ್ಷಣೆ ಮತ್ತು ಭವಿಷ್ಯದ ಬೆಳವಣಿಗೆಯನ್ನು ಬಿಂಬಿಸುವ ನಿದರ್ಶನಗಳಾಗಿದ್ದಾರೆ. ಕ್ರಿಕೆಟ್‌ಗೆ ಅಭಿಮಾನದ ಹುಚ್ಚುಹೊಳೆಯೇ ಹರಿಯುವ ಭಾರತದ ಬಹುತೇಕ ನಗರ, ಪಟ್ಟಣಗಳಲ್ಲಿ ತರಬೇತಿ ಕೇಂದ್ರಗಳು ಆರಂಭವಾಗಿವೆ. ಈಶಾನ್ಯ ರಾಜ್ಯಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ಕಡೆಯೂ ಸಾವಿರಾರು ಮಕ್ಕಳು ಚೆಂಡು, ದಾಂಡಿನ ಸಖ್ಯ ಬೆಳೆಸಿಕೊಂಡಿದ್ದಾರೆ. ಮಕ್ಕಳ ಪಾಲಕರೇ ಮುಂಚೂಣಿಯಲ್ಲಿ ನಿಂತು ಕ್ರಿಕೆಟ್ ಆಡುವ ಅವಕಾಶ ನೀಡುತ್ತಿದ್ದಾರೆ. ರಾಷ್ಟ್ರೀಯ ತಂಡದಲ್ಲಿ ಜಾಗ ಸಿಗುತ್ತದೋ ಬಿಡುತ್ತದೋ, ಐಪಿಎಲ್‌ನಲ್ಲಿ ಆಡುವ ಅವಕಾಶ ಗಿಟ್ಟಿಸಬೇಕು ಎನ್ನುವ ಗುರಿ ಈಗ ಮಕ್ಕಳು ಮತ್ತು ಪಾಲಕರ ಮನದಲ್ಲಿದೆ. ಸದ್ಯ ನಡೆಯುತ್ತಿರುವ ಬೇಸಿಗೆ ಶಿಬಿರಗಳಲ್ಲಿ

**8** ಐಪಿಎಲ್‌ನಲ್ಲಿ ಆಡುವ ಒಟ್ಟು ತಂಡಗಳು



ಯುವ ಮತ್ತು ಅನುಭವಿ ಆಟಗಾರರ ಪೈಪೋಟಿ ಹೇಗಿದೆ ನೋಡಿ. ಅಭ್ಯಾಸದಲ್ಲಿಯೂ ಯುಜುವೇಂದ್ರ ಚಾಹಲ್ ಮತ್ತು ವಿರಾಟ್ ಕೊಹ್ಲಿಯವರ ಜಿದ್ದಾಜಿದ್ದಿ.